

ಅವನು ಬರುತ್ತಾನೆ
ಹೋಗುತ್ತಾನೆ
ಹೋಗುತ್ತಾನೆ ಬರುತ್ತಾನೆ ಏನೇನೋ ಗುನುಗುತ್ತಾ...
ಗುಂಗಾಣಿ ನಾದ ಒಳ ಹೊಗಿಸಿಕೊಂಡು


ಸಂಜೆ ಹೊತ್ತು ಮಾತ್ರ
ಅವರಿಬ್ಬರು ಟೇಬಲ್ಲಿಗೆ ಎದರು ಬದುರಾಗಿ ಕೂತು
ಏನೇನೋ ಪಿಸುಗುಟ್ಟಿ ಬಹಳ ತಡವಾಗಿ
ಊಟ ಮಾಡುತ್ತಾರೆ



ಮೇಲಿನ ಕವಿತೆಯನ್ನು ಎಚ್.ಎಸ್. ಶಿವಪ್ರಕಾಶ್, ಜಯಶ್ರೀನಿವಾಸ ರಾವ್, ಕಮಲಾಕರ ಭಟ್ ಹಾಗೂ ಕೇಶವ ಮಳಗಿ ಅವರಿಗೆ ಕಳುಹಿಸಿದೆ. ಅವರು ಮೆಚ್ಚಿಕೊಂಡು ಪ್ರತಿಕ್ರಿಯಿಸಿದರು. ಮಳಗಿಯವರು ಸೂಕ್ತ ಸಲಹೆ ಸೂಚನೆಗಳನ್ನು ನೀಡುತ್ತ, 'ನಿಮ್ಮ ಕವಿತೆ ಸ್ವಂತ ಕವಿತೆಯೇ ಆಗಿದೆ' ಅಂದರು. 'ಸಂವಾದಿ ಕಾವ್ಯ' ಎನ್ನುವ ಹೆಸರಿನಲ್ಲಿ ಒಂದು ಲೇಖನ ಮಾಡಿ ಎಂದೂ ಸೂಚಿಸಿದರು. ಇತ್ತೀಚೆಗೆ ಅಚಾನಕ್ಕಾಗಿ ಸಿಕ್ಕ ಅಬ್ದುಲ್ ರಶೀದ್ ಅವರು ಇದನ್ನು ಓದಿ, **'Good One, make it bit naughty'** ಎಂದು ಇ–ಮೇಲ್ ಮಾಡಿದ್ದಕ್ಕೆ, ಮತ್ತೆ ತಿದ್ದಿದೆ.

ಇನ್ನೊಂದು ದಿನ ರೂಮಿಯ ಪದ್ಯಗಳನ್ನು ಓದುತ್ತಿದ್ದೆ.

**Last Night You Left Me And Slept**



**Last night you left me and slept
your own deep sleep. Tonight you turn
and turn. I say,
'You and I will be together
till the universe dissolves.'
You mumble back things you thought of
when you were drunk.**

ರೂಮಿ ಕವಿತೆಯ ತಲೆಬರಹ ನನ್ನನ್ನು ಬಹಳ ಸೆಳೆಯಿತು. ನನಗೆ ಯಾಕೋ ಹೀಗೆ ಬರೆಯಬೇಕೆನ್ನಿಸಿತು:

## ಮಲಗಿದ್ದೆ ನೀನು ನಿನ್ನೆ ರಾತ್ರಿ ನನ್ನ ಬಿಟ್ಟು



ಮಲಗಿದ್ದೆ ನೀನು ನಿನ್ನೆ ರಾತ್ರಿ ನನ್ನ ಬಿಟ್ಟು
ಹೊರಳಾಡುತ್ತಿದ್ದೆ ಗಾಢ ನಿದ್ರೆಯಲ್ಲಿ ಹಾಸಿಗೆ ತುಂಬ
ಸಣ್ಣ ಮಗುವಿನಂತೆ
ಅತ್ತಿಂದಿತ್ತ ಇತ್ತಿಂದ ಅತ್ತ